ಅಧ್ಯಕ್ಷರು:– ಯಾವುದೂ ಗಮನ ಸೆಳೆಯುವ ಸೂಚನೆಗಳು ಇಲ್ಲ ತೆಗೆದುಕೊಳ್ಳಿ. ಬೋಪಯ್ಯನವರು ಇಲ್ಲ, ಪ್ರಕಾಶ್, ಹೆಚ್.ಡಿ. ರೇವಣ್ಣ, ಇದು ಆಯಿತಲ್ಲ? ಅಭಿವೃದ್ಧಿಪಡಿಸುವುದು ಹೇಳಿ. ಇಲ್ಲ.

ಶ್ರೀ ಸಿದ್ದು ಬಿ. ನ್ಯಾಮಗೌಡ:– ನಮ್ಮಲ್ಲಿ. . . .

ಅಧ್ಯಕ್ಷರು:– ಇಲ್ಲ, ಸುಮ್ಮನಿರಿ.

7) ಗಮನ ಸೆಳೆಯುವ ಸೂಚನೆಗಳು.

1) **ವಿಷಯ: ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅರ್ಜಿ ಸಲ್ಲಿಸಿರುವ ಬಗರ್‌ಹುಕುಂ ಸಾಗುವಳಿದಾರರಿಗೆ ಹಾಗೂ ಮಂಚನಬೆಲೆ ಅಣೆಕಟ್ಟಿನ ಮುಳಗಡೆ ಪ್ರದೇಶದ ರೈತರಿಗೆ ನೀಡಿರುವ ಪರಿಹಾರ ಜಮೀನುಗಳನ್ನು ಪೋಡಿ ಮಾಡದೇ ವಿಳಂಬವಾಗುತ್ತಿರುವ ಬಗ್ಗೆ.**

ಶ್ರೀ ಎಸ್.ಟಿ. ಸೋಮಶೇಖರ್ (ಯಶವಂತಪುರ):– ಮಾನ್ಯ ಅಧ್ಯಕ್ಷರೆ, ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅರ್ಜಿ ಸಲ್ಲಿಸಿರುವ ಬಗರ್‌ಹುಕುಂ ಸಾಗುವಳಿದಾರರಿಗೆ ಹಾಗೂ ಮಂಚನಬೆಲೆ ಅಣೆಕಟ್ಟಿನ ಪ್ರದೇಶದ ರೈತರಿಗೆ ನೀಡಿರುವ ಪರಿಹಾರ ಜಮೀನುಗಳನ್ನು ಪೋಡಿ ಮಾಡದೇ ವಿಳಂಬವಾಗುತ್ತಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು:– ಇದೆಯೇ? ಹೇಳುತ್ತೀರಾ? ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು):– ಇವರು ಕೇಳಿರುವ ಪ್ರಶ್ನೆಗೆ statement ದೊಡ್ಡದು ಇದೆ. ಮಾನ್ಯ ಅಧ್ಯಕ್ಷರೆ,

ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿ ಕನ್ನಲ್ಲಿ ಗ್ರಾಮದಲ್ಲಿ 126,

ಕೊಡಿಗೆಹಳ್ಳಿ ಗ್ರಾಮದಲ್ಲಿ 67, ಹೊಸಹಳ್ಳಿ ಗೊಲ್ಲರಪಾಳ್ಯ ಗ್ರಾಮದಲ್ಲಿ 7, ಮಂಗನಹಳ್ಳಿ ಗ್ರಾಮದಲ್ಲಿ 48 ಮತ್ತು ಶೀಗೆಹಳ್ಳಿ ಗ್ರಾಮದಲ್ಲಿ 02 ಒಟ್ಟು 250 ಅರ್ಜಿಗಳು ನಮೂನೆ–50 ರಲ್ಲಿ ಸ್ವೀಕೃತಗೊಂಡಿದ್ದು ಎಲ್ಲಾ ಅರ್ಜಿಗಳನ್ನು ವಜಾಗೊಳಿಸಲಾಗಿರುತ್ತದೆ.

ಅದೆ ರೀತಿ ಕನ್ನಲ್ಲಿ ಗ್ರಾಮದಲ್ಲಿ 08, ಕೊಡಿಗೆಹಳ್ಳಿ ಗ್ರಾಮದಲ್ಲಿ 17, ಹೊಸಹಳ್ಳಿ ಗೊಲ್ಲರಪಾಳ್ಯ ಗ್ರಾಮದಲ್ಲಿ 01, ಮಂಗನಹಳ್ಳಿ ಗ್ರಾಮದಲ್ಲಿ 02 ಮತ್ತು ಶೀಗೆಹಳ್ಳಿ ಗ್ರಾಮದಲ್ಲಿ 05 ಒಟ್ಟು 33 ಅರ್ಜಿಗಳು ನಮೂನೆ–53 ರಡಿ ಸ್ವೀಕೃತವಾಗಿದ್ದು ಈ ಎಲ್ಲಾ ಅರ್ಜಿಗಳನ್ನು ಸಹ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 18 ಕಿ.ಮೀ ಪರಿಧಿಯೊಳಗಿನ ಗ್ರಾಮಗಳಿಗೆ ಸಂಬಂದಪಡುವುದರಿಂದ ಸದರಿ ಅರ್ಜಿಗಳನ್ನು ಸಕ್ರಮೀಕರಣಗೊಳಿಸಲು ಅವಕಾಶವಿರುವುದಿಲ್ಲವೆಂದು ಸಮಿತಿಯು ತೀರ್ಮಾನಿಸಿದಂತೆ ಅರ್ಜಿಗಳನ್ನು ತಿರಸ್ಕರಿಸಲಾಗಿರುತ್ತದೆ.

ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ನಮೂನೆ 50 ರಡಿ 2629 ಅರ್ಜಿಗಳು ಸ್ವೀಕೃತವಾಗಿದ್ದು ಈ ಪೈಕಿ 1488 ಅರ್ಜಿಗಳಿಗೆ ಮಂಜೂರು ಮಾಡಿದೆ, 441 ಅರ್ಜಿಗಳನ್ನು ತಿರಸ್ಕರಿಸಲಾಗಿದೆ, ಉಳಿದ 700 ಅರ್ಜಿಗಳು ಪರಿಶೀಲನೆಗಾಗಿ ಬಾಕಿ ಇರುತ್ತದೆ. ಅದೆ ರೀತಿ ನಮೂನೆ –53ರಡಿ ಒಟ್ಟು 2,213 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 945 ಅರ್ಜಿಗಳು ಅಂಗೀಕಾರವಾಗಿ ಮಂಜೂರು ಮಾಡಲಾಗಿದೆ. 1,070 ಅರ್ಜಿಗಳನ್ನು ತಿರಸ್ಕರಿಸಲಾಗಿದೆ, ಉಳಿದ 198 ಅರ್ಜಿಗಳು ಪರಿಶೀಲನೆಗಾಗಿ ಬಾಕಿ ಇರುತ್ತದೆ.

ಮಂಜೂರಾದ ಜಮೀನುಗಳ ಪೋಡಿ ದುರಸ್ತಿ ಬಗ್ಗೆ ಸರ್ಕಾರದ ಸುತ್ತೋಲೆ ಸಂ:ಆರ್‌ಡಿ 74 ಎಲ್‌ಜಿಪಿ 2009 ದಿ:17–09–2009 ಮತ್ತು ಭೂಮಾಪನ ಆಯುಕ್ತರ ಸುತ್ತೋಲೆ ಸಂ: ತಾಂ/ಆಡಳಿತ–ಸುತ್ತೋಲೆ–29/09–10 ದಿ:25–01–2010 ರಂತೆ ನಿಮಯಾನುಸಾರ ಕ್ರಮವಹಿಸಲಾಗುವುದು

ಮಂಚನಬೆಲೆ ಅಣೆಕಟ್ಟಿನ ಮುಳುಗಡೆ ಪ್ರದೇಶದ ರೈತರುಗಳಿಗೆ ಈಗಾಗಲೇ ಭೂಸ್ವಾಧೀನದ ಬಾಬ್ತು ಪರಿಹಾರ ಹಾಗೂ ಘನ ನ್ಯಾಯಾಲಯದಿಂದ ಹೆಚ್ಚುವರಿ ಮೊತ್ತದ ಆದೇಶದಂತೆ ಭೂ ಪರಿಹಾರವನ್ನು ನೀಡಲಾಗಿರುತ್ತದೆ.

ಈ ಯೋಜನೆಯಿಂದ ಭಾದಿತರಾದ ಫಲಾನುಭವಿಗಳಿಗೆ ಈ ಕೆಳಕಂಡ ಗ್ರಾಮಗಳಲ್ಲಿ ಪುನರ್ ವಸತಿ ಕಲ್ಪಿಸಲಾಗಿರುತ್ತದೆ.

1. ಕೋಲೂರು

2. ವರ್ತೂರು

3. ಸೀಗೇಹಳ್ಳಿಗೇಟ್

4. ಚೋಳನಾಯಕನಹಳ್ಳಿ

ಈ ಮೇಲ್ಕಂಡ 4 ಗ್ರಾಮಗಳು ಹಾಲಿ ಬೆಂಗಳೂರು ದಕ್ಷಿಣ ತಾಲ್ಲೂಕಿಗೆ ಒಳಪಟ್ಟಿರುತ್ತದೆ)

ಪೋಡಿ/ದುರಸ್ತಿಗೆ ಸಂಬಂಧಿಸಿದಂತೆ ಕೋಲೂರು, ವರ್ತೂರು, ಸೀಗೇಹಳ್ಳಿಗೇಟ್ ಮತ್ತು ಚೋಳನಾಯಕನಹಳ್ಳಿ ಗ್ರಾಮಗಳು ಹಾಲಿ ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯಾಪ್ತಿಗೆ ಒಳಪಟ್ಟಿದ್ದು ಪೋಡಿ ಕಾರ್ಯ ಪ್ರಗತಿಯಲ್ಲಿರುತ್ತದೆ.

ಶ್ರೀ ಎಸ್.ಟಿ. ಸೋಮಶೇಖರ್:– ಅದೇನೂ ಬೇಡ. Last chapter ಒಂದನ್ನು ಹೇಳಿಬಿಡಿ. ಮಾನ್ಯ ಸಚಿವರೆ, ಸುಮಾರು 29 ವರ್ಷಗಳಾಗಿವೆ.

ಅಧ್ಯಕ್ಷರು:– ಏನು ಹೇಳಿ?

ಶ್ರೀ ಎಸ್.ಟಿ. ಸೋಮಶೇಖರ್:– ಮಂಚನಬೆಲೆ project ಗೆ ರೈತರು ಜಮೀನು ಕಳೆದುಕೊಂಡಿದ್ದಾರೆ. ಒಬ್ಬ ರೈತನಿಗೆ ಎರಡು ಎಕರೆಯನ್ನು ಕೊಟ್ಟಿದ್ದಾರೆ. ಸುಮಾರು 120 ಜನ ರೈತರಿಗೆ 2–2 ಎಕರೆಯನ್ನು. . . .

ಅಧ್ಯಕ್ಷರು:– ಪೋಡಿಯಾಗಬೇಕಲ್ಲವೇ?

ಶ್ರೀ ಎಸ್.ಟಿ. ಸೋಮಶೇಖರ್:– ಪೋಡಿಯಾಗಬೇಕು.

ಅಧ್ಯಕ್ಷರು:– ಅಷ್ಟೇ ಹೇಳಿ. ಏನು ಅದರಲ್ಲಿ. . . .

ಶ್ರೀ ಎಸ್.ಟಿ. ಸೋಮಶೇಖರ್:– ಅಷ್ಟೇ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ದೀರ್ಘವಾಗಿ ಹೇಳಿಕೆ ಕೊಡುತ್ತೇನೆ.

ಅಧ್ಯಕ್ಷರು:– ಹೇಳಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– First ಕೇಳಿ ಆನಂತರ ಅವರು ಮಾತನಾಡಬಹುದು.

ಅಧ್ಯಕ್ಷರು:– ಕುಳಿತುಕೊಳ್ಳಿ, ಅವರು ಹೇಳುವುದು ಕೇಳಿ. ಶಾಸನ ಸಭೆಗೆ ಬಂದು ಹೇಳುವುದು ಸಾಮಾನ್ಯ ಎಂದು ತಿಳಿದುಕೊಂಡಿರಾ?

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಕನ್ನಲ್ಲಿ ಗ್ರಾಮದಲ್ಲಿ 126, ಕೊಡಿಗೆಹಳ್ಳಿ ಗ್ರಾಮದಲ್ಲಿ 67, ಹೊಸಹಳ್ಳಿ ಗೊಲ್ಲರಪಾಳ್ಯ ಗ್ರಾಮದಲ್ಲಿ 7, ಮಂಗನಹಳ್ಳಿ ಗ್ರಾಮದಲ್ಲಿ 48 ಮತ್ತು ಶೀಗೆಹಳ್ಳಿ ಗ್ರಾಮದಲ್ಲಿ 2 ಒಟ್ಟು 250 ಅರ್ಜಿಗಳು ನಮೂನೆ 50ರಲ್ಲಿ ಸ್ವೀಕೃತಗೊಂಡಿದ್ದು, ಎಲ್ಲಾ ಅರ್ಜಿಗಳನ್ನೂ ವಜಾಗೊಳಿಸಲಾಗಿರುತ್ತದೆ. ಅದೇ ರೀತಿ ಕನ್ನಲ್ಲಿ ಗ್ರಾಮದಲ್ಲಿ 08, ಕೊಡಿಗೆಹಳ್ಳಿ ಗ್ರಾಮದಲ್ಲಿ 17, ಹೊಸಹಳ್ಳಿ ಗೊಲ್ಲರಪಾಳ್ಯ ಗ್ರಾಮದಲ್ಲಿ 01, ಮಂಗನಹಳ್ಳಿ ಗ್ರಾಮದಲ್ಲಿ 02 ಮತ್ತು ಶೀಗೆಹಳ್ಳಿ ಗ್ರಾಮದಲ್ಲಿ 05 ಒಟ್ಟು 33 ಅರ್ಜಿಗಳು ನಮೂನೆ 53ರಡಿ ಸ್ವೀಕೃತವಾಗಿದ್ದು, ಈ ಎಲ್ಲಾ ಅರ್ಜಿಗಳನ್ನೂ ಕೂಡ ಸಹ ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಿಂದ 18 ಕಿ.ಮೀ. ಪರಧಿಯೊಳಗಿನ ಗ್ರಾಮಗಳಿಗೆ ಸಂಬಂಧ ಪಡುವುದರಿಂದ ಸದರಿ ಅರ್ಜಿಗಳನ್ನು ಸಕ್ರಮೀಕರಣಗೊಳಿಸಲು ಅವಕಾಶವಿರುವುದಿಲ್ಲವೆಂದು ಸಮಿತಿಯು ತೀರ್ಮಾನಿಸಿದಂತೆ ಅರ್ಜಿಗಳನ್ನು ತಿರಸ್ಕರಿಸಲಾಗಿರುತ್ತದೆ. ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ನಮೂನೆ 50ರಡಿ 2629 ಅರ್ಜಿಗಳು ಸ್ವೀಕೃತವಾಗಿದ್ದು. . ..

ಅಧ್ಯಕ್ಷರು:– ಮಾನ್ಯ ಸಚಿವರೆ, ಸ್ವಲ್ಪ ತಾಳಿ. ಅವರಿಗೆ ಸಾಗುವಳಿ ಚೀಟಿ ಕೊಟ್ಟಿದ್ದಾರೆಯೇ?

ಶ್ರೀ ಎಸ್.ಟಿ. ಸೋಮಶೇಖರ್:– ಸಾಗುವಳಿ ಚೀಟಿ ಕೊಟ್ಟಿದ್ದಾರೆ, ಎಲ್ಲಾ ಕೊಟ್ಟಿದ್ದಾರೆ. ಅವರಿಗೆ ಪೋಡಿ ಮಾಡಿ. . .

ಅಧ್ಯಕ್ಷರು:– ನಾನು ಹೇಳುವವರೆಗೆ ಕೇಳಿ. ಸಾಗುವಳಿ ಚೀಟಿ ಕೊಟ್ಟಿದ್ದಾರೆಯೇ?

ಶ್ರೀ ಎಸ್.ಟಿ. ಸೋಮಶೇಖರ್:– ಕೊಟ್ಟಿದ್ದಾರೆ.

ಅಧ್ಯಕ್ಷರು:– ಕೊಟ್ಟಿದ್ದರೆ, ಪಕ್ಕಾ ಪೋಡಿ ಮಾಡಬೇಕು. ನಮೂನೆ 50 ವಜಾ ಆಗಿವೆ ಎಂದು ಅವರು ಹೇಳುವುದು. ವಜಾ ಆದಮೇಲೆ ಅದರ ಮೇಲೆ ಪಕ್ಕಾ ಪೋಡಿ ಮಾಡುವ ಪ್ರಶ್ನೆ ಇಲ್ಲ. ಸಾಗುವಳಿ ಚೀಟಿ ಕೊಟ್ಟಿದ್ದಾರೆ ಅದನ್ನು ನೀವು ಇಟ್ಟು ಅವರ ಕಡೆ ಕೊಡಿ. ಪಕ್ಕಾ ಪೋಡಿ ಮಾಡಿಕೊಡುತ್ತಾರೆ.

ಶ್ರೀ ಎಸ್.ಟಿ. ಸೋಮಶೇಖರ್:– ಅದನ್ನೇ ಕೇಳುತ್ತಿರುವುದು ಅಧ್ಯಕ್ಷರೆ. 29 ವರ್ಷಗಳಾಗಿವೆ.

ಅಧ್ಯಕ್ಷರು:– ಇನ್ನೂ 10 ವರ್ಷ ಆಗುತ್ತದೆ. ನೀವು ಕೇಳುವ ರೀತಿಯಲ್ಲಿ ಕೇಳಿ, ಮಾಡುವ ರೀತಿಯಲ್ಲಿ ಮಾಡಿದರೆ ಇನ್ನೂ 10 ವರ್ಷ ಆಗುತ್ತದೆ.

ಶ್ರೀ ಎಸ್.ಟಿ. ಸೋಮಶೇಖರ್:– ಮಾನ್ಯ ಅಧ್ಯಕ್ಷರೆ, ಇನ್ನೇನು ಕೇಳಬೇಕು?

ಅಧ್ಯಕ್ಷರು:– ಅದಕ್ಕೆ ಒಂದು ಕೆಲಸ ಮಾಡಿ. ಅವರಿಗೆ ಸಾಗುವಳಿ ಚೀಟಿ ಕೊಟ್ಟಿದ್ದರೆ, ಸಾಗುವಳಿ ಚೀಟಿಯ ನಕಲು, ಪಹಣಿ ನಕಲು ಇಟ್ಟು, ತಹಶೀಲ್ದಾರ್‌ರವರಿಗೆ ಪಕ್ಕಾ ಪೋಡಿ ಮಾಡಿಕೊಡುವುದಕ್ಕೆ ಅರ್ಜಿ ಕೊಡಿ. ಮಾನ್ಯ ಸಚಿವರ ಗಮನಕ್ಕೆ ತನ್ನಿ. ಬೇಗ ಮಾಡಿಸಿಕೊಡುತ್ತಾರೆ.

(ಗೊಂದಲ)

ಶ್ರೀ ಎಸ್.ಟಿ. ಸೋಮಶೇಖರ್:– 29 ವರ್ಷಗಳಾಗಿವೆ. ಯಾವಾಗ ಮಾಡುತ್ತಾರೆಂದು Minister ರವರಿಂದ ಹೇಳಿಸಿಬಿಟ್ಟರೆ ಸಾಕು.

ಅಧ್ಯಕ್ಷರು:– ಸಾಗುವಳಿ ಚೀಟಿ ಕೊಟ್ಟಿದ್ದಾರೆನ್ನುವುದನ್ನು ನೀವು ಇಲ್ಲಿ ಬರೆದೇ ಇಲ್ಲ. ಹೇಳಿ ಮಾಡಿಸಿಕೊಳ್ಳಿ. ಅದರಲ್ಲಿ ಏನಿದೆ? ಮಾನ್ಯ ಸಚಿವರೆ, ಈಗ individual case ನಲ್ಲಿ ಪಕ್ಕಾ ಪೊಡಿ ಮಾಡಬೇಕಾದರೆ, ಜಿಲ್ಲಾಧಿಕಾರಿಗಳ ಅನುಮತಿ ಬೇಕು. ಹಿಂದೆ ನಾನೇ ಒಂದು ಸಾರಿ ಹೇಳಿ ಮಾಡಿದ್ದೇನೆ. ಬಹಳ ತೊಂದರೆಯಾಗುತ್ತದೆ. ಹಿಂದೆ ತಹಶೀಲ್ದಾರ್‌ರವರಿಗೆ ಅಧಿಕಾರ ಇತ್ತು. ತಹಶೀಲ್ದಾರ್‌ರವರಿಗೆ individual case ನಲ್ಲಿ ಪಕ್ಕಾ ಪೋಡಿ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಜಯಚಂದ್ರರವರೆ, ಹೇಳಿ, ನಿಮಗೇನಾಗಿದೆ?

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಗಮನಿಸಿದ್ದೇನೆ. ಅದಕ್ಕೆ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:– ಮಾನ್ಯ ಸಚಿವರೆ, ದಯವಿಟ್ಟು ಮಾಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಆಯಿತು, ಅವರು ಪ್ರಸ್ತಾಪ ಮಾಡಿದ್ದಾರೆ, ಮಾಡೋಣ.

ಅಧ್ಯಕ್ಷರು:– ದಯವಿಟ್ಟು, ಮಾಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಪೋಡಿ ಮಾಡಿದೆ ಎಂದು ಹೇಳುತ್ತಿದ್ದು, ಅವರು ಈಗ ಏನು ಹೇಳಿದ್ದಾರೆ ಅದನ್ನು ಮಾಡೋಣ.

ಅಧ್ಯಕ್ಷರು:– ಆಯಿತು ಸಾಕು.

ಶ್ರೀ ಸಿದ್ದು ಬಿ. ನ್ಯಾಮಗೌಡ:– ಸಾರ್, ನಮ್ಮದೊಂದು ಇದೆ.